Registered Number M. 1299. SATYAVADI (Founded 1917) Every Evening

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 28 ಸಂಚಿಕೆ 290] ಮಂಗಳವಾರ 21—8—45 [3 ಪೈ

ವೃತ್ತಾಂತ ಸಂಗ್ರಹ

ಇದೇ 24 ಮತ್ತು 25 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಚುನಾವಣೆ ನಡೆಯುವುದು.

ಂ ಂ

ನಿನ್ನೆಯ ದಿವಸ ಪುಣ್ಯಾಹ್ನೆ ಗೋರಿಬಿದನೂರಿನಲ್ಲಿ ಶ್ರೀ ಎಚ್. ಸಿ. ತಿಮ್ಮಾರೆಡ್ಡಿರವರ ದತ್ತಗಿಯಾಗಿರುವುದಾಗಿ ತಿಳಿಯಬಂದಿದೆ.

ಂ ಂ

ಸಾಲಮ್ಮ ಎಂಬ ಯುವತಿ ಬೆಂಗಳೂರು ರೆಲ್ವೆಸ್ಟೇಷನ್ನಲ್ಲಿ ಗುಡ್ಸಿನ ಅಡಿಯಲ್ಲಿ ಕುಳಿತಿದ್ದಾಗ 'ಇಂಜನ್' ಗುಡ್ಸಿಗೆ ತಗುಲಿದ ಕಾರಣ ಗುಡ್ಸು ಅಕೆಯಮೇಲೆ ಹರಿದಕಾರಣ ಆಸ್ಪತ್ರೆಯಲ್ಲಿ ಸತ್ತಳು.

ಂ ಂ

ತಿರುಮಲೆ ತಾತಾಚಾರ್ಯ ಶರ್ಮರು ಅನಿಮಿಯ ನಿಮಿತ್ತ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲ್ಪಟ್ಟರು.

ಂ ಂ

ಬಾಬು ಸುಭಾಷಚಂದ್ರ ಬೋಸರವರನ್ನು ಭಾರತ ಸರ್ಕಾರದ ವಶಕ್ಕೆ ಒಪ್ಪಿಸಲಾಗುವುದು ಎಂಬುದಾಗಿ ಭಾರತ ಸರ್ಕಾರದ ಕಛೇರಿ ಹೇಳಿದೆ. ಇನ್ನೊಂದು ಸುದ್ದಿಯ ಪ್ರಕಾರ ಸುಭಾಷರು ರಷ್ಯಾಕ್ಕೆ ಮಾತ್ರ ಶರಣಾಗುವರೆಂತಲೂ ತಿಳಿಯಬಂದಿದೆ.

ಂ ಂ

ಭಾರತ ಕಾಂಗ್ರೆಸಿನ ಮೇಲಿನ ಪ್ರತಿಬಂಧಕಾಜ್ಞೆಗಳನ್ನು ಈ ವಾರದಲ್ಲಿ ರದ್ದು ಮಾಡುವುದಾಗಿ ಗೊತ್ತಾಗಿದೆ.

ಂ ಂ

ಲಕ್ನೋವಿನ ದುರ್ಗಾ ನೆಯಿಗೆ ಕಾರ್ಖಾನೆಗೆ ಬೆಂಕಿಬಿದ್ದು ಸ್ತ್ರೀಯರಿಬ್ಬರು ಬೆಂದು ಸತ್ತರು.

ಂ ಂ

ಪಂಜಾಬ್ ಮೇಲ್ ಉರುಳಿದ ಪ್ರಕರಣದಲ್ಲಿ ನಾಲ್ವರಿಗೆ ಗಲ್ಲಿನ ತಿಕ್ಷೆಯನ್ನು ವಿಧಿಸಲಾಗಿದೆ.

ಅಣುಬಾಂಬುಗಳು

ಇವುಗಳಲ್ಲಿ ಸೇರಿರುವ ಮುಖ್ಯವಾದ ಪದಾರ್ಥವು ಯುರೇನಿಯಂ. ಈ ಯುರೇನಿಯಂ ಖನಿಜದ ಈಗೆ ಪೌಂಡಿಗೆ ಹತ್ತು ಶಿಲಿಂಗುಗಳು ಅಂದರೆ ಸುಮಾರು 5 ರೂ. ಗಳು. ಈ ಯುರೇನಿಯಂನ ಒಂದು ಸಣ್ಣ ಅಣುವು ವಿಮಾನವನ್ನು ಪ್ರಪಂಚವ ಸುತ್ತಲಾ ಹಾರಿಸುವ ಶಕ್ತಿಯನ್ನು ಹೊಂದಿರುತ್ತದೆ. ಒಂದು ಪೌಂಡು ಯುರೇನಿಯಂನಲ್ಲಿ ಎಷ್ಟು ಶಕ್ತಿ ಇರುವುದೆಂದರೆ 5 ಮಿಲಿಯ ಪೌಂಡು ಕಲ್ಲಿದ್ದಲ್ಲಿನ ಅಥವಾ 3 ಮಿಲಿಯ ಪೌಂಡು ಪೆಟ್ರೋಲಿನ ಶಕ್ತಿಯುಳ್ಳದ್ದಾಗಿರುತ್ತದೆ.

ಸಂಯುಕ್ತ ಸಂಸ್ಥಾನದಲ್ಲಿ ರೇಡಿಯೊ ಮತ್ತು ಪತ್ರಿಕೆಯ ಮೇಲಿನ ನಿರ್ಬಂಧವನ್ನು ಪಜಾ ಮಾಡಲಾಗಿದೆ.

ಂ ಂ

ಬರ್ಲಿನ್ ನಿವಾಸಿಗಳು ತಮ್ಮಲ್ಲಿರುವ ನಗ ನಾಣ್ಯಗಳನ್ನೆಲ್ಲಾ ಮಿತ್ರ ಸೇನಾಧಿಕಾರಿಗೆ ೧೦ ದಿವಸದೊಳಗಾಗಿ ಒಪ್ಪಿಸಬೇಕೆಂದು ಆಜ್ಞೆ ಹೊರಟಿದೆ.

ಂ ಂ

ಪ್ರಮುಖ ನಾಜೀ ಯುದ್ಧ ತಜ್ಞೀರು ದಾರರ ವಿಚಾರಣೆ ವಿಧಾನವನ್ನು ಪರೀಕ್ಷಿಸಲು ಅನೇರಿಕಾ, ರಷ್ಯಾ, ಇಂಗ್ಲೆಂಡ್ ಫ್ರಾನ್ಸ್ ಪ್ರತಿನಿಧಿಗಳು ನೂರೆಂಬರ್ಗಿಗೆ ಪ್ರಯಾಣ ಮಾಡಿದರು.

ಂ ಂ

ಸರ್ಕಾರದ ನೀತಿಯು ಹಿಂದುಗಳ ಹಕ್ಕು ಭಾಧ್ಯತೆಗೆ ವಿರುದ್ಧವಾಗಿದೆಯೆಂದು ಸರ್ ಗೋಕುಲ್‌ಚಂದ್ ನರಂಗರವರು ನೈಟ್ ಹುಡ್ ಪ್ರಶಸ್ತಿಯನ್ನು ವಾಪಸು ಮಾಡುವುದಾಗಿ ತಿಳಿಸಿರುವರು.

ಂ ಂ

ಪಾಂಡಿಚೇರಿ ಅರವಿಂದ ಆಶ್ರಮದಲ್ಲಿ 'ಅಮ್ಮನ' ಪ್ರಾರ್ಥನೆಯಲ್ಲಿ 'ವಿಜಯಿಗಳು ತಮ್ಮ ಮಾತಿನಂತೆ ನಡೆಯಲಿ' ಎಂದು ಹೇಳಿರವರು.

ಪ್ರಜಾಪ್ರಭುತ್ವ ಸ್ಥಾಪನೆಯಾಗಲಿ

ಯುದ್ಧವು ಮುಕ್ತಾಯವಾಹುದರಿಂದ, ಭಾರತ ಸ್ವಾತಂತ್ರ್ಯದ ಸ್ಥಿರವಾದ ಮತ್ತು ಕಟ್ಟಕಡೆ ವ್ಯವಸ್ಥೆ ನಡೆಯಬೇಕೆಂದೂ ಈ ರೀತಿಯಾಗಬೇಕಾದರೆ ಇತರ ಸ್ವತಂತ್ರ ರಾಜ್ಯಗಳೊಡನೆ ಅದು ಸಹಸಹಕರಿಸಲು ಸ್ವಾತಂತ್ರ್ಯ ಭಾರತಕ್ಕೆ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂದೂ ಪ್ರಿ | ಆಜಾದ್ ಅವರಿಗೆ ಹೇಳಿದರು.

೯೩ನೇ ಸೆಕ್ಷನ್ ಹೋಗಲಿ

ಕಲ್ಕತ್ತಾ ಆ 19— ಒಂದು ಸಾರ್ವಜನಿಕ ಸಭೆಯಲ್ಲಿ ಫಜಲಲ್ ಹಕ್ ಮೊದಲಾದ ಮುಖಂಡರು ಮಾತನಾಡಿ ಬಂಗಾಳಾದಲ್ಲಿ 93 ನೇ ಸೆಕ್ಷನ್ ಹೋಗಬೇಕೆಂದೂ, ಕ್ಷಾಮಸ್ಥಿತಿಯಿಂದ ಜನರು ಗಾಬರಿಗೊಂಡಿರುವರೆಂದೂ ತಿಳಿಸಿದರು.

ಡಾ | ಅಲಗಪ್ಪ ಚೆಟ್ಟಿಯಾರ್

ಕೊಚ್ಚಿನ್ ಟೆಕ್ಸ್‌ಟೈಲ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ಡಾ || ಅಲಗಪ್ಪ ಚೆಟ್ಟಿಯಾರರು 1 ಲಕ್ಷ ರೂ. ವ್ಯಯದಿಂದ ಕಟ್ಟಿಸಿರುವ ರವಿವರ್ಮಾ ಆಸ್ಪತ್ರೆಗೆ ಹೆರಿಗೆ ವಾರ್ಡ್ ಮತ್ತು ಮಿಲ್ಲಿನಲ್ಲಿ ಕೆಲಸಮಾಡುವವರ ಮಕ್ಕಳನ್ನು ನೋಡಿಕೊಳ್ಳಲು ಒಂದು ಗೃಹದ ಕಟ್ಟಡದ ಅಸ್ತಿಭಾರವನ್ನು ಬ್ರಿ | ರೆಸಿಡೆಂಟರ ಪತ್ನಿಯವರು ನೇರವೇರಿಸಿ ಶ್ರೀ ಚೆಟ್ಟಿಯಾರರ ಧಾತ್ಯತ್ವವನ್ನು ಕೊಂಡಾಡಿದರು. ಆ ಸಮಾರಂಭ ಕಾಲದಲ್ಲಿ ಶ್ರೀ ಚೆಟ್ಟಿಯಾರರು ವಿಜಯೋತ್ಸವ ಸ್ಮಾರಕಕ್ಕಾಗಿ ರೂ. 100001 ದಾನ ಮಾಡಿದರು.

ಶರಣಾಗತ ಸಮ್ಮೇಳನಕ್ಕೆ

ಮ್ಯಾನಿಲಾ ಆ 19— ಇಲ್ಲಿಗೆ ಜಪಾನಿ ಶರಣಾಗತದ ಪ್ರಥಮ ಕಾರ್ಯಗಳನ್ನು ನಡೆಸಲು 16 ಮಂದಿ ಜಪಾನೀ ರಾಯಭಾರಿಗಳು ಬಂದಿರುವರು. ಇವರನ್ನು ಸಮ್ಮೇಳನ ಸ್ಥಾನಕ್ಕೆ ವಿಶೇಷವಿಮಾನದಿಂದ ಕರೆದೊಯ್ಯಲಾಯಿತು. ಅಲ್ಲಿಗೆ ವಿಸ್ತೃತಲು ಹಿಡಿದುಕೊಂಡು ಹೋಗಲು ಅವಕಾಶ ಕೊಡಲ್ಪಡಲಿಲ್ಲ

ಮಹಾತ್ಮ ಗಾಂಧೀಜಿಯವರು ನಿನ್ನೆ ಬೊಂಬಾಯಿಗೆ ತಲುಪಿದರು ಈ ದಿನವೆ ಪೂನಾಕ್ಕೆ ಹೊರಡುವರು.

ಹರಿಜನ ಪೌರೋಹಿತ್ಯ

ಇಂದುಮತಿ ಗಾನಾಜಿ ಮತ್ತು ಟಿಂಡಲ್ಕರರ ವಿವಾಹದಲ್ಲಿ ಮಹಾತ್ಮ ಗಾಂಧೀಜೀ ಹಾಜರಿದ್ದು ತಾವೇ ನೂತ ದಾರದಿಂದ ತಯಾರಿಸಿದ ಹಾರಗಳನ್ನು ವಧೂವರರಿಗೆ ಹಾಕಿದರು. ಈ ವಿವಾಹದಲ್ಲಿ ಪೌರೋಹಿತ್ಯವನ್ನು ನಡೆಸಿದವನು ಒಬ್ಬ ಹರಿಜನರವನು.

ಹಿಟ್ಲರ್ ಮತ್ತೆ ಹುಟ್ಟಾನು !

ಈಗ ಕೆನಡಾದಲ್ಲಿರುವ ಪ್ರಸಿದ್ಧ ಜೈನ ತತ್ವಜ್ಞಾನಿ ಮತ್ತು ಲೇಖಕ ಡಾ | ಲಿಂ ಯು ಟಾಂಗ್ " ವಿ. ಕಾಡೋಡಕ್ರವರ್ತಿಯನ್ನು ಒಬ್ಬ ಬಟ್ಲರ್ ಸ್ಥಿತಿಗಿಳಿಸಬೇಕೆಂದೂ, ಅತನು ಮಿತ್ರ ಸೇನಾನಿಗೆ ನೀರು ಕೊಡುವುದು, ಸಿಗರೇಟನ್ನು ಹತ್ತಿಸುವುದು ಮುಂತಾದ ಕೆಲಸಗಳನ್ನು ಮಾಡಬೇಕೆಂದೂ ' ತಿಳಿಸಿರುವನು. ಮಿತ್ರರು ಜಪಾನರನ್ನು ಸರಿಯಾದ ಹದೋಟಿಯಲ್ಲಿಡದಿದ್ದರೆ, ೧೦ ವರ್ಷಗಳಲ್ಲಿ ಒಬ್ಬ ಜಪಾನಿ ಹಿಟ್ಲರ್ ಹೊರಬೀಳುವುದಾಗಿಯೂ ಹೇಳಿರುವರು.

ಮೈಸೂರು ಪೌರಸಭೆಯ ೫೫ ನೇ ಸಾಧಾರಣ ಸಭೆ ಇದೇ 25 ನೇ ತಾರೀಖು ನಡೆಯುವುದು.

ಮುಂದಿನ ಮಾಹೆ ೧೬ ರಲ್ಲಿ ಮೈಸೂರು ಸಿಟಿ ಕೊ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಸಭೆ ಸೇರುವುದು.

ಹಾಸನದಲ್ಲಿ ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ೪ ನೇ ಅಧಿವೇಶನ ನಡೆಯುವುದು.

ಗಾಂಧೀಜಿ ಪ್ರಪಂಚದ ಶ್ರೀ ಜ್ಞಾನಾಂತವಾರ್ಕಿ ಒಂದು ವಿ || ರಾಯಭಾವಾಕರರು ಲಂಡನ್ನಿನಲ್ಲಿ ವೇದಾಂತ ಜಲವಳದವು ನಡೆಸಿದ ' ಪ್ರಪಂಚ ಶಾಂತಿ ಸಮ್ಮೇಳನ ' ದಲ್ಲಿ ತಿಳಿಸಿದರು.

ಸೂಚನೆ — ಉಪಾಕರ್ಮದ ಪ್ರಯುಕ್ತ ನಾಳೆ ಪತ್ರಿಕೆಗೆ ರಜಾಕೊಡಲ್ಪಟ್ಟಿದೆ. ನ್ಯೂ, ಸತ್ಯವಾದಿ.

ಲಂಚದ ಹಾವಳಿ ತಪ್ಪಿಸಲು ಉಪಾಯಗಳು ?

ಗಣಿಗಳಲ್ಲಿ, ಮಿಲ್ಲುಗಳಲ್ಲಿ ಕೆಲಸಮಾಡುವವರನ್ನು ಹೊರಕ್ಕೆ ಬಿಡುವಾಗ ಶೋಧನೆಮಾಡಿ ಬಿಡುವಂತೆ, ಆಫೀಸು, ಕೋರ್ಟ್‌ಕಛೇರಿ ಮೊದಲಾದ ಸ್ಥಳಗಳಲ್ಲಿ ಕೆಲಸ ಮಾಡುವವರು, ಅವರು ಅಧಿಕಾರಿಗಳಾಗಲೀ ನೌಕರರಾಗಲೀ ಆಫೀಸಿನ ಹೊಸಲನ್ನು ದಾಟುತ್ತಲೂ ಶೋಧನೆ ಮಾಡಲ್ಪಟ್ಟು ಅವರಲ್ಲಿ ಹಣ ದೊರೆತಲ್ಲಿ ಆ ಹಣವನ್ನು ಸರಕಾರಕ್ಕೆ ಸೇರಿಸಿಕೊಳ್ಳುವಂತಾಗಬೇಕು. ಈ ಶೋಧನಾ ಕಾರ್ಯಕ್ಕೆ ನಿಯಮಿತರಾದವರು, ಅಲ್ಪ ಸಂಬಳದವರಾದರೂ ಇತರ ಸರಕಾರಿ ಉದ್ಯೋಗಿಗಳ ಹಾಗೂ ಆಫೀಸರ ತಾಬೇದಾರಿಯಂತೆ ಪರಿಗಣಿಸಕೂಡದು.

ಆಫೀಸಿಗೆ ಹೋಗುವಾಗ ಯಾವ ಗುಮಾಸ್ತರೂ ಆಫೀಸರೂ ಹಣವನ್ನು ಜೇಬಿನಲ್ಲಿಟ್ಟುಕೊಂಡು ಹೋಗಕೂಡದೆಂಬ ನಿಯಮವಿರಬೇಕಾದ್ದು. ಮಧ್ಯಾಹ್ನ ಟಿಫಿನ್ನಿಗಾಗಿ, ರೈಲು, ಟ್ರಾಂ, ಬಸ್ಸುಗಳ ಖರ್ಚಿಗಾಗಿ ಹಣ ಇಟ್ಟುಕೊಳ್ಳಬೇಕಾಗಿದ್ದಲ್ಲಿ ಶೋಧಕ ಸಂಸ್ಥೆಯವರಲ್ಲಿ ಆಫೀಸನ್ನು ಪ್ರವೇಶಿಸುವುದಕ್ಕೆ ಮುಂಚೆ ಆ ಹಣವನ್ನು ಪಾವತಿಮಾಡಿ ರಶೀತಿ ಪಡೆದು ಮನೆಗೆ ಹೋಗುವಾಗ ತೆಗೆದುಕೊಂಡು ಹೋಗುವಂತಾಗಬೇಕು.

ಗುಡ್ಸ್‌ಷೆಡ್ಡು, ಬುಕ್ಕಿಂಗ್ ಆಫೀಸು, ಪಾರ್ಸಲ್ ಆಫೀಸು, ಸಬ್ ರೆಜಿಸ್ಟ್ರಾರ್ ಆಫೀಸು, ಮೊದಲಾದುವುಗಳಲ್ಲಿ ಕೆಲಸ ಮಾಡುವವರ ಶೋಧನೆಯು ಅವರು ಕೆಲಸಮಾಡುತ್ತಿರುವಾಗ ಕೂಡ ಆಗಾಗಂದಾಗ್ಗೆ ಆಗುತ್ತಿರಬೇಕಾದ್ದು.

ಪ್ರತಿಯೊಬ್ಬ ಸಂಸಾರಿಯ ಆದಾಯ, ವ್ಯಯಗಳನ್ನೂ, ಅವನು ಆಸ್ತಿವಂತನಾಗಿದ್ದಲ್ಲಿ, ಅಷ್ಟು ಆಸ್ತಿಯು ಕೂಡಲು ಕಾರಣಗಳೇನಿರಬಹುದೆಂದು ವಿಚಾರಿಸಿ ಲಂಚಭುಜುವತ್ತುಗಳೂ ಕಾರಣಗಳಾಗಿ ಕಂಡುಬಂದಲ್ಲಿ ಆ ಆಸ್ತಿಯನ್ನೆಲ್ಲಾ ಸರ್ಕಾರಕ್ಕೆ ವಹಿಸಿಕೊಳ್ಳುವಂತಾಗಬೇಕು.

ಆಫೀಸರುಗಳು ಯಾವ ಸರ್ಕಾರ ವ್ಯವಹಾರವನ್ನಾಗಲಿ ತಾವು ನಡೆಯಿಸುತ್ತಿರುವಾಗ ಮಾಡಬಾರದೆಂಬ ನಿಬಂಧನೆ ಇರಬೇಕಾದ್ದು.

ಸರ್ಕ್ಯೂಟು ಹೋಗುವ ಆಫೀಸರುಗಳು ತಾವು ಪ್ರಯಾಣವನ್ನು ಜರುಗಿಸುವಾಗ ಎಷ್ಟು ಹಣವನ್ನು ತಮ್ಮೊಂದಿಗೆ ಇಟ್ಟುಕೊಂಡಿರುವುದು, ಪ್ರಯಾಣಾವಶ್ಯದಲ್ಲಿ ಎಷ್ಟು ಮಿಕ್ಕಿರುವುದೂ ಶೋಧನೆಯಾಗುತ್ತಿರಬೇಕಾದ್ದು. ಇವರಿಂದ ಸರ್ಕಾರದವರು ಕೊಡುವ ಪ್ರಯಾಣ ಖರ್ಚು ಎಷ್ಟುವಟ್ಟಿಗೆ ಉಪಯೋಗಿಸಲ್ಪಡುವುದೆಂದು ತಿಳಿಯುಬರುವುದು.

ನಿರ್ದಾಕ್ಷಿಣ್ಯವಾಗಿ ಕೆಲಸಮಾಡುವವರಿಲ್ಲದೆ ಲಂಚಭುಜುವತ್ತುಗಳನ್ನು ಬೇರಿನೊಂದಿಗೆ ಕಿತ್ತೊಗೆಯುವುದು ಅಸಂಭವವು.

ಆಫೀಸರುಗಳು ಲಂಚವನ್ನು ತೆಗೆದುಕೊಂಡರೆಂಬ ಅಪವಾದನೆ ಇಲ್ಲದಿರುವುದಕ್ಕಾಗಿ, ಆಫೀಸರುಗಳ ಹೆಂಗಸರಿಗೆ ಮಕ್ಕಳಿಗೆ ಉಡುಗೆ ಆಭರಣ ಮೊದಲಾದ ರೂಪಗಳಲ್ಲಿ ಒಂದುಒಳಗದವರಲ್ಲದವರು ಕೊಡುವುದು ತಪ್ಪತಕ್ಕದ್ದು. (ಓಂ)

ಇಟಲಿಯಲ್ಲಿ ಬ್ರಿಟಿಷರ ಶುಭಾಗಮನ

17—8—45 ರಿಂದ

At Ranjit

DUKH-SUKH

ರಣಜಿತ್ ಟಾಕೀಸಿನಲ್ಲಿ

ನಿತಾರ — ರಾಮಮೂರ್ತಿ — ವಾಸಂತಿ

ಪಾತ್ರವಹಿಸಿರುವ

ದುಖ್-ಸುಖ್

(ಹಿಂದಿ)

ಪ್ರತಿ ದಿನ 3 ಆಟಗಳು

For Good Printing—

L. N. Press

Sriramji st MYSORE

TALK-A-TONE

(Pioneer Film-mag of S. India)

Local Agent—D. Mahadev

Opera Talkies, Mysore

Edited, Printed and published by M. S. Krishna Rao, at the Satyavadi Press, Chamaraja Agrahar, Mysore.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೧೬೭ ಚಾಮರಾಜಪುರಂ ಮೈಸೂರು.

AT Opera— Last day !

ಒಪೇರಾ ಟಾಕೀಸ್‌ನಲ್ಲಿ .... ಕಡೇ ದಿನ !

ಮುಜರಿಂ (ಹಿಂದಿ)

ಮೋತೀಲಾಲ್, ಲೀಲಾದೇಸಾಯ್, ಯಾಕೂಬ್, ಜಗದೀಶ್

ಪಾತ್ರವಹಿಸಿರುವರು

At OPERA— From 22-8-45

BROTHERHOOD

ಭಾಯ್‌ಚಾರ

— An Amar Release